**ಪಿಡಬ್ಲೂಃ 1** **ಅಸಲು ದಾವೆ ಸಂ.106/2020**

ದಿನಾಂಕ **04-08-2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀಸವಾಲುಃ ಶ್ರೀ. ಜಿ. ಬಿ. ವಿ . ಪ್ರತಿವಾದಿ ಪರ ವಕೀಲರಿಂದಃ-</u>**

1. ನಾನು ತಾಲ್ಲೂಕು ಕಚೇರಿಯಲ್ಲಿ ವಂಶವೃಕ್ಷ ಪಡೆದುಕೊಂಡಿದ್ದೇನಾ ಎಂದರೆ ಪಡೆದುಕೊಂಡಿಬಹುದು. ನಾನು ಈ ದಾವೆ ಹೂಡುವಾಗ ವಂಶವೃಕ್ಷ ಕೊಟ್ಟಿದ್ದೀನಾ ಎಂದರೆ ನನಗೆ ನೆನಪಿಲ್ಲ. ನಾನು ನ್ಯಾಯಾಲಯಕ್ಕೆ ನನ್ನ ಗುರುತಿನ ಚೀಟಿಯನ್ನು ಕೊಟ್ಟಿದ್ದೀನಾ ಎಂದರೆ ಕೊಟ್ಟಿದ್ದೇನೆ, ಟಿ ಸಿ ಹಾಗೂ ಆಧಾರ ಕಾರ್ಡ್ ಕೊಟ್ಟಿರುತ್ತೇನೆ.

2. ನನಗೆ ಮದುವೆಯಾಗಿ 27 ವರ್ಷ ಆಗಿದೆ. ದಾವಾ ಸ್ವತ್ತಿನಲ್ಲಿ ನಾವು ಬೆಳೆ ಬೆಳೆಸುವುದಿಲ್ಲ ಎಂದರೆ ಇಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲಾ ಎಂದರೆ ಆಗಾಗ ಹೋಗಿ ಬರುತ್ತೇನೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಬೆಳೆದಿರುವ ಬೆಳೆಯಲ್ಲಿ ನನಗೆ ಏನೂ ಕೊಟ್ಟಿಲ್ಲ ಎಂದರೆ ಪ್ರತಿವಾದಿಗಳು ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲ.

3. ನನ್ನ ತಂದೆ ತೀರಿಕೊಂಡ ನಂತರ ಫವತಿ ವಾರಸು ಖಾತೆಗೆ ಅರ್ಜಿ ಹಾಕಿದ್ದೀರಾ ಎಂದರೆ ಇಲ್ಲ. ನನ್ನ ಜನನ ಪ್ರಮಾಣ ಪತ್ರ ಇದೆಯಾ ಎಂದರೆ ಇಲ್ಲ. ನಾನು ನಾರೆಪ್ಪ ರವರ ಮಗಳು ಅಲ್ಲ ಆದ್ದರಿಂದ ಜನನ ಪ್ರಮಾಣ ಪತ್ರ ಇಲ್ಲ ಎಂದರೆ ನಾನು ನಾರೆಪ್ಪ ನವರ ಮಗಳೇ. ನಾನು ನಾರೆಪ್ಪ ರವರ ಮಗಳು ಆಗದೇ ಇರುವುದರಿಂದ ವಂಶವೃಕ್ಷಕ್ಕೆ ತಾಲ್ಲೂಕು ಕಚೇರಿಯಲ್ಲಿ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ.

4. ದಾವಾ ಸ್ವತ್ತುಗಳು ಪ್ರತಿವಾದಿ 1 ಮತ್ತು 3 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ಹೆಸರಿಗೆ ಖಾತೆಯಾದ ಮೇಲೆ ನಾನು ತಕರಾರು ಮಾಡಿಲ್ಲ ಎಂದರೆ ಇಲ್ಲ ಮಾಡಿದ್ದೆ. ಆದರೆ ಅವರು ನನಗೆ ಏನೂ ಸಂಬಂಧ ಇಲ್ಲ ಎಂದು ಜಗಳ ಮಾಡಿದ್ದಾರೆ. ನಾನು ಎಲ್ಲಿ ತಕರಾರು ಮಾಡಿದ್ದೆ ಎಂದರೆ ನಾನು ತಕರಾರು ಕಚೇರಿಯಲ್ಲಿ ಮಾಡಿಲ್ಲ. ಪ್ರತಿವಾದಿಯರಿಗೆ ಕೇಳಿರುತ್ತೇನೆ. ನಾನು ಸದರಿ ವಿಚಾರವಾಗಿ ಪ್ರತಿವಾದಿಯರಿಗೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

5. ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲದೇ ಇರುವುದರಿಂದ ಈ ದಾವೆಯ ಮೂಲಕ ಪ್ರತಿವಾದಿಯರ ವಿರುದ್ಧ ಪ್ರಶ್ನೆ ಮಾಡು ಅಧಿಕಾರ ಇರುವುದಿಲ್ಲ ಎಂದರೆ ಯಾಕೆ ಇರುವುದಿಲ್ಲ ಅದು

ನಮ್ಮ ತಂದೆ ತಾಯಿಯ ಆಸ್ತಿ ಎನ್ನುತ್ತಾರೆ. ಪ್ರತಿವಾದಿಗಳ ಜೊತೆ ನಾನು ಯಾವಗಲೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಇದ್ದೇವು. ನಾನು ದಾವೆಯಲ್ಲಿ ತಿಳಿಸಿರುವಂತೆ ದಾವಾ ಆಸ್ತಿಯೂ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕುಟುಂಬದವರಾದ ತಾಯಿ ಮತ್ತು ಅಕ್ಕ ನಮ್ಮ ಮನೆಯಲ್ಲೆ ಇರುತ್ತಿದ್ದರು.

6. ಪ್ರತಿವಾದಿಗಳ ರಕ್ತದ ಜೊತೆ ನನ್ನ ರಕ್ತ ಪರೀಕ್ಷೆ ಮಾಡಿಸಲು ನನ ತಕರಾರು ಏನಾದರೂ ಇದೆಯಾ ಎಂದರೆ ಮಾಡಿಸಬಹುದು. ನಾನು ಅನಾಥೇ ನಾನು ಪ್ರತಿವಾದಿಯರ ಕುಟುಂಬಕ್ಕೆ ಸಿಕ್ಕಿರುವ ಮಗು ಅವರು ಸಾಕಿ ಮದುವೆ ಮಾಡಿರುತ್ತಾರೆ, ಆದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನಗೆ ಯಾವಾಗಲೂ ನಾನು ಸಾಕು ಮಗಳು ಎಂದು ಹೇಳಿಲ್ಲ.

7. ದಾವಾ ಆಸ್ತಿಯಲ್ಲಿ ನನ್ನ ಯಾವುದೇ ಹಕ್ಕು ಇಲ್ಲದಿದ್ದರೂ ಪ್ರತಿವಾದಿಗಳ ಮೇಲೆ ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**–

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.